ಆ. ವಿಜಾಪುರ ಜಿಲ್ಲೆಯ ಮಿನಿ ಗ್ರೋಥ್ ಸೆಂಟರ್‌ನಲ್ಲಿ ಸ್ಥಾಪಿಸುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಶೇ.25 ರಷ್ಟು ಗರಿಷ್ಠ ರೂ.12.50 ಲಕ್ಷದವರೆಗೆ ಸಹಾಯಧನ ಮಂಜೂರು ಮಾಡಲಾಗುವುದು 'ಸಿ' ವಲಯದಲ್ಲಿ, ಶೇ.20 ರಷ್ಟು ಗರಿಷ್ಠ ರೂ. 10.00 ಲಕ್ಷದವರೆಗೆ ಸಹಾಯಧನ ಮಂಜೂರು ಮಾಡಲಾಗುವುದು. ವಿಜಾಪುರ ಜಿಲ್ಲೆಯಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ 5 ವರ್ಷಗಳ ಪ್ರವೇಶ ಕರ ವಿನಾಯಿತಿ ನೀಡಲಾಗುವುದು. ಮಿನಿ ಗ್ರೋಥ್ ಸೆಂಟರ್ ವಿಜಾಪುರದಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ 8 ವರ್ಷಗಳ ಪ್ರವೇಶ ತೆರಿಗೆ ವಿನಾಯಿತಿಯನ್ನು ನೀಡಲಾಗುವುದು. ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಲು ಗರಿಷ್ಠ 2 ಎಕರೆ ಜಮೀನು ಕೈಗಾರಿಕೆಗಳಿಗಾಗಿ ಪರಿವರ್ತನಾ ಶುಲ್ಕವನ್ನು ಮನ್ನಾ ಮಾಡಲಾಗುವುದು.

ಉ. 1. ಈ ದಿಸೆಯಲ್ಲಿ 2001-05ನೇ ಸಾಲಿನ ವಿಜಾಪುರ ಜಿಲ್ಲೆಯ ಕೈಗಾರಿಕಾ ಮಾಸ್ಟರ್‌ಪ್ಲಾನ್‌ನ್ನು ತಯಾರಿಸಲಾಗಿದೆ. ಅದನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

2. ಸ್ಥಳೀಯ ಲಭ್ಯವಿರುವ ಕಚ್ಚಾ ಮಾಲಿನ ಆಧಾರದ ಮೇಲೆ ಮಾನವ ಸಂಪನ್ಮೂಲ ಆಧಾರದ ಮೇಲೆ ಸ್ಥಾಪಿಸಬಹುದಾದ ಕೈಗಾರಿಕೆಗಳಿಗೆ ಒತ್ತು ಕೊಡಲಾಗುವುದು. ಮುಖ್ಯವಾಗಿ ಕೃಷಿ ಆಧಾರಿತ ಆಹಾರ ಸಂಸ್ಕರಣಾ ಘಟಕಗಳು, ಹಣ್ಣು ಸಂಸ್ಕರಣಾ ಘಟಕಗಳು, ಕೋಲ್ಡ್ ಸ್ಟೋರೇಜ್, ಜವರಲ್ ಇಂಜಿನಿಯರಿಂಗ್ ವರ್ಕ್ಸ್, ಕೆಮಿಕಲ್ ಇಂಡಸ್ಟ್ರಿ ಇತ್ಯಾದಿಗಳನ್ನು ಸ್ಥಾಪಿಸಬಹುದು.

3. ಮಿನಿ ಗ್ರೋಥ್ ಸೆಂಟರ್ ಅನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಊ. ಈ ಕೆಳಕಂಡಂತೆ ಯೋಜನೆಗಳನ್ನು ರೂಪಿಸಲಾಗಿದೆ. ಯಶಸ್ವಿ ಯೋಜನೆ, ಬಂಡವಾಳ ಹೂಡಿಕೆದಾರರ ಸಮಾವೇಶ, ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ, ಉದ್ಯಮಶೀಲತಾ ಜಾಗೃತ ಶಿಬಿರ, ಸ್ವಶಕ್ತಿ ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೇಲೂರು ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ನಿವೇಶನ ವಿತರಣೆ.

1275(1005) ಶ್ರೀ ಪುಟ್ಟರಂಗನಾಥ್ ಎಸ್.ಜೆಡ್. (ಬೇಲೂರು) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೇಲೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗೆ ನಿವೇಶನಗಳನ್ನು ಮಾಡಿದ್ದು ಇವುಗಳನ್ನು ಕೈಗಾರಿಕೆ ಪ್ರಾರಂಭಿಸುವವರಿಗೆ ವಿತರಿಸಲಾಗಿದೆಯೇ;

ಆ) ಹಗರೆಯಲ್ಲಿರುವ ಕೈಗಾರಿಕೆ ಶೆಡ್‌ಗಳು ಶಿಥಿಲಾವಸ್ಥೆಯಲ್ಲಿದ್ದು, ದುರಸ್ತಿ ಮಾಡಿಸಿ ಬೇರೆಯವರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಇದುವರೆವಿಗೆ ತಾಲ್ಲೂಕಿನಲ್ಲಿ ಪಿ.ಎಂ.ಆರ್.ವೈ. ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಸಾಲ ವಿತರಿಸಲಾಗಿದೆ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ನಿವೇಶನಗಳ ಹಂಚಿಕೆಗಾಗಿ ಪ್ರಕಟಣೆ ಹೊರಡಿಸಲಾಗಿತ್ತು. ಉದ್ದಿಮೆದಾರರು ಯಾವುದೇ ನಿವೇಶನ ಹಂಚಿಕೆಗೆ ಅರ್ಜಿಗಳನ್ನು ಸಲ್ಲಿಸಿಲ್ಲ. ಕಾರಣ ಹಂಚಿಕೆ ಮಾಡಲು ಆಗಿರುವುದಿಲ್ಲ. ನಿವೇಶನ ಕೇಳಿ ಮುಂದೆ ಬರುವ ಆಸಕ್ತಿಯುಳ್ಳ ಉದ್ದಿಮೆದಾರರಿದ್ದರೆ ನಿವೇಶನ ಹಂಚಿಕೆ ಮಾಡಲಾಗುವುದು.

ಆ) ಹೌದು ಹಾಳಾಗಿವೆ. ದುರಸ್ತಿ ಮಾಡಬೇಕಾಗಿದೆ. ಕೈಗಾರಿಕೆ ನಡೆಸಲು ಆಸಕ್ತಿ ತೋರಿ ಮುಂದೆ ಬಂದವರಿಗೆ ಷೆಡ್‌ಗಳನ್ನು ದುರಸ್ತಿ ಮಾಡಿ ಹಂಚಿಕೆ ಮಾಡಲಾಗುವುದು.

ಇ) ಬೇಲೂರು ತಾಲ್ಲೂಕಿನಲ್ಲಿ ಪಿ.ಎಂ.ಆರ್.ವೈ. ಯೋಜನೆಯಡಿಯಲ್ಲಿ ಈವರೆವಿಗೂ ಒಟ್ಟು 334 ಫಲಾನುಭವಿಗಳಿಗೆ ಒಟ್ಟು ರೂ.180.113 ಲಕ್ಷಗಳ ಸಾಲವನ್ನು ವಿತರಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಹೊಸ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸುವುದು.

1276(1469) ಶ್ರೀ ರಾಜೇಂದ್ರ ಪಾರ್ಟೆ (ಹುಲ್‌ಸೂರ್) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ಇರುವ ಪಶುಚಿಕಿತ್ಸಾಲಯಗಳ ಸಂಖ್ಯೆ ಎಷ್ಟು? (ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹೊಸ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗುವುದು? (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು)

ಇ) ಈ ಪೈಕಿ ಎಷ್ಟು ಹೊಸ ಪಶುಚಿಕಿತ್ಸಾಲಯಗಳನ್ನು ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಾರಂಭಿಸಲಾಗುವುದು?

ಈ) ಕಳೆದ 3 ವರ್ಷಗಳಲ್ಲಿ ಜಿಲ್ಲೆಯಲ್ಲಿ ಎಷ್ಟು ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) - 41 -

ವಿಧಾನಸಭಾ ಕ್ಷೇತ್ರವಾರು ಅಂಕಿಅಂಶಗಳು ಈ ಕೆಳಕಂಡಂತೆ ಇವೆ: